ಶ್ರೀ ವೈ. ರಾಮಕೃಷ್ಣ : ನೀವು ತಂದಿರುವುದು ಎಲ್ಲಿಗೆ ತಾಲ್ಲೂಕು ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ ಪಂಚಾಯಿತಿಗೆ. You have forgotten the Balavantha Rao Mehta Committee Report as well Ashok Mehta Committee report.

SRI M.P. PRAKASH : This is only replacement of ordinance.

(INTERRUPTIONS)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ರಾಮಕೃಷ್ಣ ಅವರು ಸೀನಿಯರ್ ಮೆಂಬರ್.11 ಗಂಟೆಯಿಂದ ಇಲ್ಲಿಯವರೆಗೆ ಎರಡೇ ಬಿಲ್ ಗವರ್ನಮೆಂಟ್ ಬಿಸಿನೆಸ್ ಆಗಿರುವುದು. ಬಾಕಿಯದು ಎಲ್ಲಾ ಪ್ರೈವೇಟ್ ಮೆಂಬರ್ಸ್ ಬಿಸಿನೆಸ್ ಮಾಡಿದ್ದೇವೆ. ಹೌಸ್ ಎಂದು ಹೇಳಿದರೆ ತಾವು ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರ್ ಆಗಿದ್ದವರು. ಹೌಸ್ ಎಂದರೆ ಗವರ್ನಮೆಂಟ್ ಬಿಸಿನೆಸ್ ಸಹ ಆಗಬೇಕು. ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ what type of House we are running. How many hours we have spent on Government business? Most of the time we have spent and consumed for private members business.

SRI Y. RAMAKRISHNA : I cannot understand.

ಉಪಾಧ್ಯಕ್ಷರು : ಈಗ ನಾನು ಲಾ ಮಿನಿಸ್ಟರಗೆ ಹೇಳುತ್ತಿದ್ದೇನೆ. ಎಲ್ಲಾ ವಿರೋಧ ಪಕ್ಷದವರು ಇಲ್ಲದಂತಹ ಸಮಯದಲ್ಲಿ ಮಸೂದೆ ತೆಗೆದುಕೊಳ್ಳುವುದು ಬೇಡ. ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಂ. ಸಿ . ನಾಣಯ್ಯ : ಇವರಿಗೆ ಕೂರಲಿಕ್ಕೆ ಬೇಕಾಗಿಲ್ಲ ಎಂದು ಹೇಳಿ ಒಬ್ಬೊಬ್ಬರೇ ಎದ್ದು ಹೋಗಿ ವಿರೋಧ ಪಕ್ಷದವರು ಇಲ್ಲ ಎಂದು ಹೇಳಿದರೆ.

ಶ್ರೀ ವೈ. ರಾಮಕೃಷ್ಣ : ಕ್ಷಮಿಸಿ ದಯವಿಟ್ಟು, ನಾವು ಇದ್ದೇವೆ.

ಶ್ರೀ ಎಂ.ಸಿ. ನಾಣಯ್ಯ : ಒಬ್ಬೊಬ್ಬರೇ ಎದ್ದು ಹೋಗಿದ್ದಾರೆ. ನಿನ್ನೆ ಸರ್ಕಾರದ ಪರವಿಂದ ರಿಪ್ಲೈ ಕೊಡುವಾಗ ಒಳಗಡೆ ಇದ್ದರು. ಇವತ್ತು ನಮ್ಮ ಸರ್ಕಾರ ಕಡೆಯಿಂದ ಲೆಜಿಸ್ಲೇಷನ್ ಪಾಸ್ ಆಗುವಾಗ ಒಬ್ಬೊಬ್ಬರೇ ಎದ್ದು ಹೋಗುವುದು. Official business means legislative business. We are not at all doing legislative business at all.

ಶಾಸನಾತ್ಮಕ ನಿರ್ಣಯಗಳು

ಸಿದ್ದಾಪುರ ತಾಲ್ಲೂಕು ಹೆಗ್ಗರಣಿ ಗ್ರಾಮದ ಅರಣ್ಯ ಸರ್ವೆ ನಂಬರ್ 96ರಲ್ಲಿ 10 ಗುಂಟೆ ಪ್ರದೇಶ ನಿರ್ವನೀಕರಣಗೊಳಿಸುವುದು.

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈ ಕೆಳಕಂಡ ನಿರ್ಣಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸುತ್ತೇನೆ.

ನಿರ್ಣಯ

"ಕರ್ನಾಟಕ ಅರಣ್ಯ ಅಧಿನಿಯಮ, 1963ರ (1994ರ ಕರ್ನಾಟಕ ಅಧಿನಿಯಮ ಸಂಖ್ಯೆ 5) 28ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಈ ಮುಂದಿನ ಕರಡು ಅಧಿಸೂಚನೆಯನ್ನು ಈ ಸದನವು ಈ ಮೂಲಕ ಅನುಮೋದಿಸುತ್ತದೆ.

ಅಧಿಸೂಚನೆ

ಕರ್ನಾಟಕ ಅರಣ್ಯ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 5) 28ನೇ ಪ್ರಕರಣದ (1)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಯು 15-3-1969 ರಿಂದ ಮೀಸಲು ಅರಣ್ಯವಾಗಿರುವುದು ನಿಂತಹೋಗತಕ್ಕದ್ದೆಂದು ಕರ್ನಾಟಕ ಸರ್ಕಾರವು, ರಾಜ್ಯ ವಿಧಾನ ಮಂಡಲದ ಸದನಗಳ ಅನುಮೋದನೆಯೊಂದಿಗೆ ಈ ಮೂಲಕ ನಿರ್ದೇಶಿಸಿದೆ.

ಅನುಸೂಚಿ

ಜಿಲ್ಲೆ: ತಾಲ್ಲೂಕು: ಗ್ರಾಮ	ಅರಣ್ಯ ಸರ್ವೆ ನಂಬರ್	ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ	ಉದ್ದೇಶಗಳು
1	2	3	4
ಉತ್ತರ ಕನ್ನಡ ಸಿದ್ದಾಪುರ ಹೆಗ್ಗರಣೆ	96	ಎ.ಗುಂ.ಎ. 0-10-0	ಉಗ್ರಾಣ ಮತ್ತು ಕಛೇರಿಯ ನಿರ್ಮಾಣಕ್ಕಾಗಿ ಹೆಗ್ಗರಣೆ ಗ್ರೂಪ್ ವಿವಿಧೋದ್ದೇಶ ಸಹಕಾರಿ ಸಂಘ ಲಿಮಿಟೆಡ್ ಇವರ ಅಧ್ಯಕ್ಷರ ಪರವಾಗಿ ನೀಡಲಾದ ಭೂಮಿ.

ನಿರ್ಣಯ ಮಂಡಿಸಲ್ಪಟ್ಟಿತು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಕರ್ನಾಟಕ ಅರಣ್ಯ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 5) 28ನೇ ಪ್ರಕರಣದ (1)ನೇ ಉಪ ಪ್ರಕರಣದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಈ ಮುಂದಿನ ಕರಡು ಅಧಿಸೂಚನೆಯನ್ನು ಈ ಸದನವು ಈ ಮೂಲಕ ಅನುಮೋದಿಸುತ್ತದೆ."

ಅಧಿಸೂಚನೆ

"ಕರ್ನಾಟಕ ಅರಣ್ಯ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 5) 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರಗಳನ್ನು ಚಲಯಿಸಿ, ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರವ ಭೂಮಿಯು 15-3-1969ರಿಂದ ಮೀಸಲು ಅರಣ್ಯವಾಗಿರುವುದು ನಿಂತುಹೋಗತಕ್ಕದ್ದೆಂದು ಕರ್ನಾಟಕ ಸರ್ಕಾರವು, ರಾಜ್ಯ ವಿಧಾನ ಮಂಡಲದ ಸದನಗಳ ಅನುಮೋದನೆಯೊಂದಿಗೆ ಈ ಮೂಲಕ ನಿರ್ದೇಶಿಸಿದೆ.

ಅನುಸೂಚಿ

ಜಿಲ್ಲೆ: ತಾಲ್ಲೂಕು: ಗ್ರಾಮ	ಅರಣ್ಯ ಸರ್ವೆ ನಂಬರ್	ವಿಸ್ತೀರ್ಣ ಹೆಕ್ಟೇರಗಳಲ್ಲಿ	ಉದ್ದೇಶಗಳು
1	2	3	4
ಉತ್ತಕ ಕನ್ನಡ ಸಿದ್ದಾಪುರ ಹೆಗ್ಗರಣಿ	96	ಎ.ಗುಂ.ಎ. 0-10-0	ಉಗ್ರಾಣ ಮತ್ತು ಕಛೇರಿಯ ನಿರ್ಮಾಣಕ್ಕಾಗಿ ಹೆಗ್ಗರಣಿ ಗ್ರೂಪ್ ವಿವಿಧೋದ್ದೇಶ ಸಹಕಾರಿ ಸಂಘ ಲಿಮಿಟೆಡ್ ಇದರ ಅಧ್ಯಕ್ಷರ ಪರವಾಗಿ ನೀಡಲಾದ ಭೂಮಿ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ನಿರ್ಣಯಕ್ಕೆ ಅನುಮೋದನೆ ನೀಡಲಾಯಿತು.

ಉಪಾಧ್ಯಕ್ಷರು : ಈಗ ಶಾಸನಾತ್ಮಕ ನಿರ್ಣಯಕ್ಕೆ ಅನುಮೋದನೆ ದೊರಕಿದೆ. ನಿರ್ಣಯ ಅಂಗೀಕಾರವಾಯಿತು. ಈಗ ಸಭೆಯನ್ನು ಮುಂದಕ್ಕೆ ಹಾಕಿ ಸೋಮವಾರ 9.00 ಗಂಟೆಗೆ ಸೇರುತ್ತದೆ.

(ಸಭೆಯು 6.30ಕ್ಕೆ ಮುಕ್ತಾಯವಾಗಿ ಮತ್ತೆ ಸೋಮವಾರ ದಿನಾಂಕ 04.03.96 ರಂದು 9.00ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).